ಕ್ಷಯಮುಕ್ತ ಕರ್ನಾಟಕ ರೂಪಿಸುವುದು ಸರ್ಕಾರದ ಕನಸು. ಮಾರ್ಚ್ 24 'ವಿಶ್ವ ಕ್ಷಯರೋಗ ನಿವಾರಣಾ ದಿನ'. ಈ ವರ್ಷದ ವಿಶ್ವ ಕ್ಷಯರೋಗ ದಿನದ ಘೋಷಣೆ 'Invest to end TB. save lives....'– 'ಕ್ಷಯ ನಿರ್ಮೂಲನೆಗೆ ಶ್ರಮಿಸಿ; ಜೀವ ಉಳಿಸಿ..' ಆಗಿದೆ. 2025ರ ವೇಳೆಗೆ ಭಾರತದಲ್ಲಿ ಟಿಬಿಯನ್ನು ಮುಕ್ತಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ದೃಢಸಂಕಲ್ಪ ಮಾಡಬೇಕಾಗಿದೆ.



# ಕ್ಷಯ: ಬೇಡ ಭಯ, ಇದೆ ಸರ್ಕಾರದ ಅಭಯ!

ಕ್ಷಯ ಎಂಬುದು ವ್ಯಕ್ತಿಗಳಿಗೆ ಬರುವ ಒಂದು ಸಾಂಕ್ರಾಮಿಕ ರೋಗ. ಇದು ಟ್ಯೂಬರ್‌ಕ್ಯುಲೋಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆ. ಜೊತೆಗೆ ಈ ರೋಗವು ಮೈಕ್ರೊಬ್ಯಾಕ್ಟೀರಿಯಂ ಜಾತಿಯ ಹಲವು ಬ್ಯಾಕ್ಟೀರಿಯಾಗಳಿಂದಲೂ ಬರುತ್ತದೆ. ಪ್ರಮುಖವಾಗಿ ಶ್ವಾಸಕೋಶಕ್ಕೆ ಹಾನಿ ಮಾಡುವ ಈ ರೋಗ ಮುಂದೆ ದೇಹದ ಹಲವು ಅಂಗಾಂಗಗಳ ಮೇಲೆಯೂ ದುಷ್ಪರಿಣಾಮ ಬೀರಲಾರಂಭಿಸುತ್ತದೆ. ಅಲ್ಲದೆ ಕೂದಲು ಮತ್ತು ಉಗುರುಗಳನ್ನು ಹೊರತುಪಡಿಸಿ ದೇಹದ ಯಾವ ಭಾಗಗಳಲ್ಲಾದರೂ ಕಾಣಿಸಿಕೊಳ್ಳಬಹುದು. ಶ್ವಾಸಕೋಶದ ಮೇಲೆ ಪರಿಣಾಮ ಬೀರುವ ಪಲ್ಮನರಿ ಟಿಬಿ ರೋಗದ ಸಾಂಕ್ರಾಮಿಕ ರೂಪವೇ ಆಗಿದೆ.

ದೇಶದಲ್ಲಿ ಪ್ರತಿ ಒಂದು ನಿಮಿಷಕ್ಕೆ ಮೂರು ಜನ ಕ್ಷಯರೋಗದಿಂದ ಸಾವನ್ನಪ್ಪುತ್ತಿದ್ದಾರೆ. ಜನರಲ್ಲಿ ಈ ಕಾಯಿಲೆ ಬಗ್ಗೆ ಜಾಗೃತಿ ಇಲ್ಲದಿರುವುದು. ಮುಂಚೆಯೇ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳದ ಪರಿಣಾಮ ಸಾಂಕ್ರಾಮಿಕವಾಗಿ ಹರಡುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ 2020ರ ಜಾಗತಿಕ ಕ್ಷಯರೋಗದ ವರದಿಯ ಪ್ರಕಾರ ಭಾರತವು ಜಾಗತಿಕ ಕ್ಷಯರೋಗದ ಹೊರೆಯ ಶೇ. 26 ರಷ್ಟು ಪಾಲನ್ನು ಹೊಂದಿದ್ದು, ಭಾರತವು ವಿಶ್ವದ ಅತಿ ಹೆಚ್ಚು ಕ್ಷಯರೋಗಿಗಳನ್ನು ಹೊಂದಿರುವ ದೇಶ ಎಂಬುದು ಆತಂಕದ ವಿಚಾರ. ಜಗತ್ತಿನ ವಾರ್ಷಿಕ 9.96 ದಶಲಕ್ಷ ಹೊಸ ಪ್ರಕರಣಗಳಲ್ಲಿ 2.61 ದಶಲಕ್ಷ ಕ್ಷಯರೋಗಿಗಳು ನಮ್ಮ ದೇಶದಲ್ಲಿದ್ದು,